ಪ್ರಮಾಣದಲ್ಲಿ ಸೇವಿಸಿದ ಸುಮಾರು ಅರ್ಧ ಗಂಟೆಯಲ್ಲಿ ಜ್ವರ ಮತ್ತು ನೋವಿನ ತೀವ್ರತೆ ಇಳಿಮುಖವಾಗತೊಡಗುತ್ತದೆ ಮತ್ತು ಶರೀರದಲ್ಲಿ ಈ ಔಷಧದ ಪರಿಣಾಮ ಸುಮಾರು ನಾಲ್ಕರಿಂದ ಐದು ಗಂಟೆಗಳ ಕಾಲ ಉಳಿದಿರುತ್ತದೆ. ಮಕ್ಕಳಲ್ಲಿ ಬೇರೆಲ್ಲಾ ಔಷಧಗಳಂತೆಯೇ ಈ ಔಷಧವನ್ನೂ ಸಹ ಮಗುವಿನ ತೂಕಕ್ಕನುಗುಣವಾಗಿ ನೀಡಲಾಗುತ್ತದೆ. ಬಾಯಿಯ ಮುಖಾಂತರ, ಗುದನಾಳದ ಮುಖಾಂತರ ಮತ್ತು ರಕ್ತನಾಳಗಳ ಮುಖಾಂತರ ಈ ಔಷಧವನ್ನು ನೀಡಬಹುದು. ಔಷಧವು ಕಾರ್ಯನಿರ್ವಹಿಸಲು ಪ್ರಾರಂಭಿಸುವ ಅವಧಿಯಲ್ಲಿ ಕೊಂಚ ವ್ಯತ್ಯಾಸವಿರಬಹುದೇ ಹೊರತು ಯಾವುದೇ ರೂಪದಲ್ಲಿ ನೀಡಿದರೂ ಅಂತಿಮ ಪರಿಣಾಮ ಮಾತ್ರ ಒಂದೇ ಆಗಿರುತ್ತದೆ.

## ಅಡ್ಡಪರಿಣಾಮಗಳು

ಪ್ಯಾರಸಿಟಮಾಲ್ ಔಷಧವು ಸಾಮಾನ್ಯವಾಗಿ ಯಾವುದೇ ಗಂಭೀರ ಸ್ವರೂಪದ ಅಡ್ಡ ಪರಿಣಾಮವನ್ನು ಉಂಟುಮಾಡುವುದಿಲ್ಲ. ಅಪರೂಪಕ್ಕೊಮ್ಮೆ ಚರ್ಮದ ಮೇಲೆ ದದ್ದುಗಳು ಕಾಣಿಸಿಕೊಳ್ಳಬಹುದು. ಆದರೆ ಮಕ್ಕಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದ ಸೇವನೆ (ಓವರ್ ಡೋಸ್) ಅಪಾಯಕಾರಿ. ಅಚಾತುರ್ಯದಿಂದ, ಆಕಸ್ಮಿಕವಾಗಿ ಇಲ್ಲವೇ ಪ್ರಾಣಹಾನಿಯ ಸಲುವಾಗಿ ಇಂತಹ ಅವಘಡ ಸಂಭವಿಸುವುದುಂಟು. ಸಾಮಾನ್ಯವಾಗಿ ರಕ್ತದಲ್ಲಿ ಪ್ಯಾರಸಿಟಮಾಲ್ ಔಷಧದ ಪ್ರಮಾಣ, ದೇಹದ ಒಂದು ಕಿಲೋ ತೂಕಕ್ಕೆ 200 ಮಿ.ಗ್ರಾಂಗಿಂತಲೂ ಅಧಿಕವಾದಾಗ ವಿಷತ್ವದ ಲಕ್ಷಣಗಳು ಕಾಣಿಸಿಕೊಳ್ಳತೊಡಗುತ್ತವೆ. ಆರಂಭದಲ್ಲಿ ಹೊಟ್ಟೆ ತೊಳಸುವಿಕೆ, ವಾಂತಿ, ಬಳಲಿಕೆ, ಬೆವರುವಿಕೆ, ಹೊಟ್ಟೆನೋವು ಮುಂತಾದ ಸಾಮಾನ್ಯ ರೋಗಲಕ್ಷಣಗಳಷ್ಟೇ ಇರುತ್ತವೆ. ಒಂದೆರಡು ದಿನಗಳಲ್ಲಿ ಯಕೃತ್ತು ತೀವ್ರವಾಗಿ ಹಾನಿಗೊಳಗಾಗುವುದರಿಂದ ರಕ್ತದಲ್ಲಿ ಯಕೃತ್ತಿಗೆ ಸಂಬಂಧಿಸಿದ ಕಿಣ್ವಗಳ ಪ್ರಮಾಣದಲ್ಲಿ ಹೆಚ್ಚಳವಾಗತೊಡಗುತ್ತದೆ. ಆನಂತರ ಯಕೃತ್ತಿನ ಹಾನಿಗೆ ಸಂಬಂಧಿಸಿದ ಕಾಮಾಲೆ, ಪ್ರಜ್ಞಾಹೀನತೆ, ರಕ್ತಸ್ರಾವ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳತೊಡಗುತ್ತವೆ. ಕೆಲವೊಮ್ಮೆ ಮೂತ್ರಪಿಂಡದ ವೈಫಲ್ಯವೂ ಉಂಟಾಗಬಹುದು. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಲಭ್ಯವಾಗದಿದ್ದಲ್ಲಿ ಸಾವೂ ಸಂಭವಿಸಬಹುದು.

ಅಗತ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದ ಪ್ಯಾರಸಿಟಮಾಲ್ ಔಷಧದ ಸೇವನೆಯಿಂದುಂಟಾಗುವ ವಿಷತ್ವವನ್ನು 'ಎನ್ ಅಸಿಟೈಲ್ ಸಿಸ್ಟೀನ್' ಎಂಬ ಔಷಧ (ಆ್ಯಂಟಿಡೋಟ್)ವನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ. ಇದನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನೀಡುವುದರಿಂದ ಸಾವು ನೋವಿನ ಸಂಭವನೀಯತೆಯನ್ನು ತಗ್ಗಿಸಬಹುದು.



## ಪೋಷಕರಿಗೆ ಸಲಹೆಗಳು

- ಮಕ್ಕಳಲ್ಲಿ ಯಾವುದೇ ಔಷಧವು ಸಂಪೂರ್ಣ ಸುರಕ್ಷಿತವಲ್ಲ. ಯಾವ ಔಷಧವನ್ನೇ ಆಗಲಿ ಅಗತ್ಯವಿದ್ದಾಗ ಮಾತ್ರ ವೈದ್ಯರು ಶಿಫಾರಸ್ಸು ಮಾಡಿದ ರೀತಿಯಲ್ಲಿ ಬಳಸಬೇಕು.
- ಜ್ವರ ಒಂದು ರೋಗಲಕ್ಷಣವೇ ಹೊರತು ಅದೇ ಕಾಯಿಲೆಯಲ್ಲ. ಜ್ವರಕ್ಕೆ ಕಾರಣವಾಗಿರುವ ಕಾಯಿಲೆಯನ್ನು ಸರಿಯಾಗಿ ಪತ್ತೆ ಹಚ್ಚಿ, ಅದಕ್ಕೆ ತಕ್ಕಂಥ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಆ ಕಾಯಿಲೆಯು ವೈರಾಣು ಸಂಬಂಧಿತವಾಗಿದ್ದು, ಸಾಮಾನ್ಯವಾಗಿ ಸ್ವಯಂ ನಿಯಂತ್ರಣಕ್ಕೆ ಬರುವಂತಹದ್ದಾಗಿರುತ್ತದೆ. ಹಾಗಾಗಿ ಲಕ್ಷಣವನ್ನಾಧರಿಸಿದ ಚಿಕಿತ್ಸೆಯಷ್ಟೇ ಸಾಕಾಗುತ್ತದೆ.
- ಜ್ವರದ ತಾಪ ಏರಿದಾಗ ಶರೀರದ ಚಯಾಪಚಯ ಕ್ರಿಯೆಯಲ್ಲಿ ವ್ಯತ್ಯಯ ಉಂಟಾಗಿ ಮಕ್ಕಳು ಬೇಗನೆ ಸುಸ್ತಾದವರಂತೆ ಕಾಣುತ್ತಾರೆ ಮತ್ತು ಐದು ವರ್ಷದೊಳಗಿನ ಕೆಲ ಮಕ್ಕಳಲ್ಲಿ ಫಿಟ್ಸ್ ಬರುವ ಸಾಧ್ಯತೆಯಿರುತ್ತದೆ. ಈ ಕಾರಣಗಳಿಗಾಗಿಯಷ್ಟೇ ಜ್ವರದ ತಾಪವನ್ನು ತಗ್ಗಿಸಬೇಕು ಮತ್ತು ಅದಕ್ಕಾಗಿ ಆದಷ್ಟೂ ಸುರಕ್ಷಿತ ಔಷಧವನ್ನು ಬಳಸಬೇಕು.
- ಜ್ವರದ ಶಮನಕ್ಕೆ ಬಳಸಲಾಗುವ ಪ್ಯಾರಸಿಟಮಾಲ್ ಔಷಧವು ಸಾಮಾನ್ಯವಾಗಿ ಸುರಕ್ಷಿತವಾಗಿದ್ದರೂ ಮಕ್ಕಳಲ್ಲಿ ವೈದ್ಯರ ಶಿಫಾರಸ್ಸಿನನ್ವಯ ತೂಕಕ್ಕನುಗುಣವಾಗಿ ಬಳಸಬೇಕು.
- ಪ್ಯಾರಸಿಟಮಾಲ್ ಔಷಧದ ಪರಿಣಾಮವು ಸಾಮಾನ್ಯವಾಗಿ ನಾಲ್ಕರಿಂದ ಐದು ಗಂಟೆಯ ಕಾಲ ಇರುತ್ತದೆ. ಅಷ್ಟರ ಒಳಗೆ ಮೈ ಸಂಪೂರ್ಣ ತಣ್ಣಗಾಗಲಿಲ್ಲವೆಂದು ಪದೇ ಪದೇ ಔಷಧ ಬಳಸಬಾರದು. ಇದರಿಂದ ವಿಷತ್ವದ ಸಂಭವನೀಯತೆ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಇಪ್ಪತ್ತಾಲ್ಕು ಗಂಟೆಗಳ ಅವಧಿಯಲ್ಲಿ ಗರಿಷ್ಠ ನಾಲ್ಕರಿಂದ ಐದು ಬಾರಿ ಮಾತ್ರ ಈ ಔಷಧವನ್ನು ಬಳಸಬಹುದು. ನಿಗದಿತ ವೇಳೆಗೊಮ್ಮೆ ಬಳಸುವುದಕ್ಕಿಂತ ಜ್ವರದ ತಾಪ ಏರಿದಾಗ ಮಾತ್ರ ಬಳಸುವುದು ಒಳ್ಳೆಯದು.
- ಶಿಶುಗಳಲ್ಲಿ ಪ್ಯಾರಸಿಟಮಾಲ್ ಹನಿಗಳನ್ನು ಬಳಸುವಾಗ ತುಂಬಾ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಅವುಗಳಲ್ಲಿ ಔಷಧವು ಸಾಂದ್ರೀಕೃತವಾಗಿರುತ್ತದೆ. ಐದು ಹನಿ ಬಳಸುವ ಬದಲಿಗೆ ಸಿರಪ್‌ನ ಡೋಸ್‌ನಂತೆ ಐದು ಮಿ.ಲೀ. ಬಳಸಿದರೆ ಅದು ವಿಷಕಾರಿಯಾಗಿ ಪರಿಣಮಿಸಬಲ್ಲದು.
- ವಯಸ್ಕರು ಬಳಸುವ ಮಾತ್ರೆಗಳಲ್ಲಿ ಔಷಧದ ಪ್ರಮಾಣ ಹೆಚ್ಚಾಗಿರುವುದರಿಂದ ವೈದ್ಯರ ಸಲಹೆಯ ಮೇರೆಗಷ್ಟೇ ಮಕ್ಕಳಿಗೆ ಬಳಸುವುದೊಳಿತು.
- ಆ್ಯಂಟಿ ಬಯೋಟಿಕ್‌ಗಳು ಜ್ವರ ನಿವಾರಕಗಳಲ್ಲ. ಅವುಗಳನ್ನು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ವೈದ್ಯರ ಶಿಫಾರಸ್ಸಿಗನುಗುಣವಾಗಿ ಬಳಸಬೇಕು.
- ಎರಡು ಔಷಧಗಳ ಸಮ್ಮಿಳಿತ ಮಿಶ್ರಣ (ಉದಾ: ಐಬುಪ್ರೊಫೆನ್ ಮತ್ತು ಪ್ಯಾರಸಿಟಮಾಲ್) ಗಳಿಗಿಂತ ಒಂದೇ ಔಷಧವನ್ನು ನಿಗದಿತ ಪ್ರಮಾಣದಲ್ಲಿ ಬಳಸುವುದು ಕ್ಷೇಮಕರ. ಮಿಶ್ರಣಗಳಿಂದ ಎರಡೂ ಔಷಧಗಳ ಅಡ್ಡ ಪರಿಣಾಮಗಳುಂಟಾಗುವ ಸಂಭವನೀಯತೆ ಹೆಚ್ಚು.
- ಯಾವುದೇ ಔಷಧವು ಚಿಕ್ಕ ಮಕ್ಕಳ (ಅದರಲ್ಲೂ ಒಂದರಿಂದ ಮೂರು ವರ್ಷದೊಳಗಿನವರು) ಕೈಗೆಟುಕದಂತೆ ಜಾಗ್ರತೆ ವಹಿಸಬೇಕು. ಬಾಟಲಿಗಳ ಬಿರಡೆಗಳನ್ನು ಭದ್ರವಾಗಿ ಮುಚ್ಚಿಟ್ಟಿರಬೇಕು.
- ಯಾವುದೇ ಔಷಧದ ಬಳಕೆಯಿಂದ ಮಗುವಿನಲ್ಲಿ ವ್ಯತಿರಿಕ್ತ ಪರಿಣಾಮಗಳು ಕಂಡುಬಂದರೆ ಕೂಡಲೇ ವೈದ್ಯಕೀಯ ನೆರವು ಪಡೆಯಬೇಕು.